**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ**

**ಸಿ.ಸಿ. 56– 2024**

ಫಿರ್ಯಾದಿಃ **ಕರ್ನಾಟಕ ಸರ್ಕಾರ, ಚಿತ್ತಾಕುಲ ಪೋಲಿಸ ಠಾಣೆ, ಕಾರವಾರ**

–ವಿರುದ್ಧ–

ಆರೋಪಿಃ **ಶೈಲೇಶ್ ಸುರೇಶ್ ನಾಯ್ಕ,**
**28 ವರ್ಷ, ರಾಮನಾಥ ದೇವಸ್ಥಾನ ಹತ್ತಿರ , ಆಸ್ನೋಟಿ,**
**ಕಾರವಾರ. ಉತ್ತರ ಕನ್ನಡ.**

ನಾನು **ಶ್ರೀ ಧನುರಾಜ್. ಎಸ್.ಎಂ. ಬಿ.ಎ. ಎಲ್.ಎಲ್.ಬಿ., ಪ್ರ.ದ.ನ್ಯಾ ದಂ., ಕಾರವಾರ** ಆದ ನಾನು ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

**ದೋಷಾರೋಪಣೆ**

ನ್ಯಾಯಾಲಯದ ವ್ಯಾಪ್ತಿಯ ಚಿತ್ತಾಕುಲ ಪೋಲೀಸ ಠಾಣಾ ವ್ಯಾಪ್ತಿಯ ಬರುವ ರಾಮನಾಥ ದೇವಸ್ಥಾನ ಹತ್ತಿರ, ಬಿಡ್ತುಲ ಭಾಗದ, ಕಾರವಾರದಲ್ಲಿ ದಿನಾಂಕಃ 30–08–2023 ರಂದು ಸಂಜೆ 09–15 ಗಂಟೆಗೆ ಆರೋಪಿತನಾದ ನೀನು ಚಾಸಾ–17 ನೇಯವರ ಮಾಲಿಕತ್ವದ ಸ್ಕೂಟರ ಸಂಖ್ಯೆ KA–30/W–2286 ನೆದರಲ್ಲಿ ಸದಾಶಿವಗಡ ಕಡೆಯಿಂದ ಕದ್ರಾ ಕಡೆಗೆ ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ರಾಜ್ಯ ಹೆದ್ದಾರಿ –34 ರ ಮೇಲೆ ರಾಮನಾಥ ದೇವಸ್ಥಾನ ಹತ್ತಿರ, ಬಿಡ್ತುಲ ಭಾಗದಲ್ಲಿ ನಿನ್ನ ಸ್ಕೂಟರನ್ನು ನಿಷ್ಕಾಳಜಿತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ನಿನ್ನ ಬಲಬದಿಯಿಂದ ಕದ್ರಾ ಕಡೆಗೆ ಹೊಗುತ್ತಿದ್ದ ಒಂದು ಕಾರನ್ನು ಬಲಗಡೆಯಿಂದ ಓವರಟೇಕ್ ಮಾಡಿ ಕದ್ರಾ ಕಡೆಗೆ ಹೋಗುವಾಗ ಕದ್ರಾ ಕಡೆಯಿಂದ ರಸ್ತೆಯ ಎಡಬದಿಯಿಂದ ಚಲಾಯಿಸಿಕೊಂಡು ಬರುತ್ತಿದ್ದ ಸ್ಕೂಟರ ನಂ KA –30/U–8339 ನೇದಕ್ಕೆ ಎದುರುಗಡೆಯಿಂದ ಡಿಕ್ಕಿಪಡಿಸಿ ಸ್ಕೂಟರ ಸವಾರ ಜಗದೀಪ ತಂದೆ ಶಂಬಾ ನಾಗೇಕರ ಅವರಿಗೆ ಡಿಕ್ಕಿ ಹೊಡೆದು ಈ ಮೂಲಕ ನೀನು ಭಾರತೀಯ ದಂಡ ಸಂಹಿತೆ ಕಲಂ 279 ನೇದರ ಅಡಿ ಶಿಕ್ಷಾರ್ಹ ಅಪರಾಧ ಎಸುಗಿರುವಿರೆಂದು ನಿನ್ನ ಮೇಲೆ ದೋಷಾರೋಪಣೆ ಇದೆ ಮತ್ತು ಷದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ.

ಎರಡನೇಯದಾಗಿ ಅದೇ ದಿನ, ಅದೇ ಸಮಯ ಆರೋಪಿತನಾದ ನೀನು ನಿನ್ನ ಅತಿವೇಗವಾಗಿ ಮತ್ತು ನಿರ್ಲಕ್ಷತೆಯಿಂದ ಕದ್ರಾ ಕಡೆಯಿಂದ ರಸ್ತೆಯ ಎಡಬದಿಯಿಂದ ಚಲಾಯಿಸಿಕೊಂಡು ಬರುತ್ತಿದ್ದ ಸ್ಕೂಟರ ನಂ KA -30/U-8339 ನೇದಕ್ಕೆ ಎದುರುಗಡೆಯಿಂದ ಡಿಕ್ಕಿಪಡಿಸಿ ಸ್ಕೂಟರ ಸವಾರ ಜಗದೀಪ ತಂದೆ ಶಂಬಾ ನಾಗೇಕರ ಅವರಿಗೆ ಡಿಕ್ಕಿ ಹೊಡೆದು ತೀವ್ರ ತರಹದ ಗಂಭೀರ ರಕ್ತ ಗಾಯ ತಲೆಗೆ, ಮುಖಕ್ಕೆ ಹಾಗೂ ಮೈಮೇಲೆ ಮತ್ತು ಒಳನೋವು ಪಡಿಸಿ ಈ ಮೂಲಕ ನೀನು ಭಾರತೀಯ ದಂಡ ಸಂಹಿತೆ ಕಲಂ 338 ನೇದರ ಅಡಿ ಶಿಕ್ಷಾರ್ಹ ಅಪರಾಧ ಎಸುಗಿರುವಿರೆಂದು ನಿನ್ನ ಮೇಲೆ ದೋಷಾರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ?

ಮೂರನೇಯದಾಗಿ ಅದೇ ದಿನ, ಅದೇ ಸಮಯ ಆರೋಪಿತನಾದ ನೀನು ನಿನ್ನ ಅತಿವೇಗವಾಗಿ ಮತ್ತು ನಿರ್ಲಕ್ಷತೆಯಿಂದ ಜಗದೀಪ ತಂದೆ ಶಂಬಾ ನಾಗೇಕರ ಅವರಿಗೆ ಡಿಕ್ಕಿ ಹೊಡೆದು ತೀವ್ರ ತರಹದ ಗಂಭೀರ ರಕ್ತ ಗಾಯ ತಲೆಗೆ, ಮುಖಕ್ಕೆ ಹಾಗೂ ಮೈಮೇಲೆ ಉಂಟು ಮಾಡಿ ಸ್ಥಳದಲ್ಲಿಯೇ ಮರಣವನ್ನುಂಟು ಮಾಡಿ ಈ ಮೂಲಕ ನೀನು ಭಾರತೀಯ ದಂಡ ಸಂಹಿತೆ ಕಲಂ 304(A) ನೇದರ ಅಡಿ ಶಿಕ್ಷಾರ್ಹ ಅಪರಾಧ ಎಸುಗಿರುವಿರೆಂದು ನಿನ್ನ ಮೇಲೆ ದೋಷಾರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ.

ಈ ಮೇಲ್ಕಂಡ ದೋಷಾರೋಣೆಗೆ ನೀನು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆಃ 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ದೋಷರೋಪಣೆ ತಿಳಿಯಿತೆ?

**ಉತ್ತರಃ**

ಪ್ರಶ್ನೆಃ 2. ನೀನು ಈ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ಧ ವಿಚಾರಣೆ ನಡೆಯಬೇಕೆ?

**ಉತ್ತರಃ**

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **07-10-2024** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವನು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಪ್ರ.ಪ್ರ.ದ.ನ್ಯಾ ದಂ., ಕಾರವಾರ.**